# ಜಪಾನ್ ಗೊಂಬೆಗಳು ಹೇಳಿದ ಹಳ್ಳಿ ಬದುಕಿನ ಕಥೆ



'ಹೆಚ್ಚುತ್ತಿರುವ ಜನಸಂಖ್ಯೆಯು ಭಾರತ ದೇಶದ ಸಮಸ್ಯೆ' ಎಂದು ಪಾಠ ಓದಿದ್ದು ನಿಮಗೂ ನೆನಪಿರಬಹುದು. ಆದರೆ ಜಪಾನ್ ದೇಶದ ಸಮಸ್ಯೆ ವಿಭಿನ್ನ. ಅಲ್ಲಿ ಜನಿಸುವ ಮಕ್ಕಳ ಸಂಖ್ಯೆಗಿಂತ, ಸಾಯುವ ದೊಡ್ಡವರ ಸಂಖ್ಯೆ ಜಾಸ್ತಿಯಾಗಿದೆ. ಈ ವಿದ್ಯಮಾನ ಹುಟ್ಟುಹಾಕಿರುವ ಸಮಸ್ಯೆಗಳು ಒಂದೆರಡಲ್ಲ.

■ ಡಿ.ಎಂ. ಘನಶ್ಯಾಮ

ಹಳ್ಳಿಗಳಲ್ಲಿ ಯುವಜನರೇ ಇಲ್ಲ. ಹಳ್ಳಿಗಳು ವೃದ್ಧಾಶ್ರಮಗಳಾಗುತ್ತಿವೆ ಎನ್ನುವ ಮಾತು ಕರ್ನಾಟಕದಲ್ಲಿ ಕೇಳಿಬರಲು ಶುರುವಾಗಿ 10 ವರ್ಷಗಳ ಮೇಲಾಯಿತು. ಇದೇ ವಿಷಯ ಆಧರಿಸಿ, 'ಕಾಡ ಬೆಳದಿಂಗಳು' ಸಿನಿಮಾ ತೆರೆ ಕಂಡಿತ್ತು. ಈಚೆಗಷ್ಟೇ 'ನ್ಯೂಯಾರ್ಕ್ ಟೈಮ್ಸ್'ನಲ್ಲಿ ಪ್ರಕಟವಾದ ಸುದೀರ್ಘ ಬರಹ ಓದಿದ ನಂತರ ಈ ಸಿನಿಮಾ ಮತ್ತು ಹಳ್ಳಿಗಳು ವೃದ್ಧಾಶ್ರಮವಾಗುತ್ತಿವೆ ಎಂಬ ವಾಸ್ತವ ಮತ್ತೆಮತ್ತೆ ಮನಸ್ಸನ್ನು ಕಾಡಲು ಶುರುಮಾಡಿತು.

**'There Are No Children Here. Just Lots of Life–Size Dolls'** (ಇಲ್ಲಿ ಮಕ್ಕಳೇ ಇಲ್ಲ, ಇರುವುದೆಲ್ಲವೂ ದೊಡ್ಡ ಬೊಂಬೆಗಳು) ಎನ್ನುವುದು ಪತ್ರಕರ್ತೆ ಮೊಟೊಕೊ ರಿಚ್ 'ನ್ಯೂಯಾರ್ಕ್ ಟೈಮ್ಸ್'ನಲ್ಲಿ ಪ್ರಕಟಿಸಿದ ನುಡಿಚಿತ್ರದ ಶೀರ್ಷಿಕೆ. ಉತ್ತರ ಜಪಾನ್‌ನ ನಾಗೊರೊ ಎಂಬ ಸಣ್ಣ ಹಳ್ಳಿಯ ವಿದ್ಯಮಾನಗಳನ್ನು ಕೇಂದ್ರವಾಗಿಸಿಕೊಂಡು ಹೆಣೆದ ಕಥನ, ಜಗತ್ತಿನ ಹಲವು ದೇಶಗಳ ಗ್ರಾಮೀಣ ಬದುಕಿಗೂ ಕನ್ನಡಿ ಹಿಡಿಯುವಷ್ಟು ಸಶಕ್ತವಾಗಿದೆ. ಗ್ರಾಮೀಣ ಸಮಸ್ಯೆಗಳು ಮತ್ತು ಅವನ್ನು ಪತ್ರಕರ್ತರು ನೋಡಬೇಕಾದ ಕ್ರಮಗಳ ಬಗ್ಗೆಯೂ ಹೊಸ ನೋಟ ಕಟ್ಟಿಕೊಡುತ್ತದೆ.

ಶಿಕೊಕು ದ್ವೀಪದ ನದಿ ಬದಿಯಲ್ಲಿರುವ ನಾಗೊರೊ ಹೆಸರಿನ ಊರಿನಲ್ಲಿ ಈಗ 36ಕ್ಕೂ ಕಡಿಮೆ ಜನರಿದ್ದಾರೆ. ಯುವಜನರು, ಮಕ್ಕಳು ಇಲ್ಲವೇ ಇಲ್ಲ. ಈ ಊರಿನಲ್ಲಿ ಕೊನೆಯ ಮಗು ಹುಟ್ಟಿ 18 ವರ್ಷಗಳೇ ಆಗಿವೆ. ವಯಸ್ಸಾದವರು ಎಷ್ಟು ಅಂತ ಮಾತಾಡುತ್ತಾರೆ? ಏನೂ ಅಂತ ಕೆಲಸ ಮಾಡುತ್ತಾರೆ? ಊರಿನ ಪರಿಸ್ಥಿತಿ ನೋಡಿದ ಕಲಾವಿದೆ ಅಯಾನೊಗೆ ತಮ್ಮ ಹಳ್ಳಿಗೆ ಹೇಗಾದರೂ ಮಾಡಿ ಜೀವಂತಿಕೆ ತುಂಬಬೇಕು ಎನಿಸಿತು. ತಾವೇ ತಯಾರಿಸಿದ ಗೊಂಬೆಗಳನ್ನು ಅಲ್ಲಲ್ಲಿ ಅಳವಡಿಸುವ ಕೆಲಸ ಶುರು ಮಾಡಿದರು. ಅವರ ಆಶಯದಂತೆ ಊರಿಗೆ ತುಸುತುಸುವಾಗಿ ಜೀವಂತಿಕೆ ಬಂತು!

ಮಕ್ಕಳೇ ಇಲ್ಲವೆಂಬ ಕಾರಣಕ್ಕೆ ಬಾಗಿಲು ಹಾಕಿದ್ದ ಶಾಲೆಯ ಅಂಗಳದಲ್ಲಿ 40ಕ್ಕೂ ಹೆಚ್ಚು ಗೊಂಬೆಗಳನ್ನು ತಂದಿಟ್ಟಿದ್ದಾರೆ. ಪಾಠ ಕೇಳುವ, ಓಡುವ, ಈಜುವ, ಚೆಂಡಾಟ ಆಡುವ ದೃಶ್ಯಗಳನ್ನು ಮಕ್ಕಳ ಗೊಂಬೆಗಳ ಮೂಲಕ ಮತ್ತೆ ಸೃಷ್ಟಿ ಮಾಡಿದ್ದಾರೆ. ಪಾಠ ಮಾಡುವ ಮೇಷ್ಟ್ರು ಬೊಂಬೆಗಳೂ ಇವೆಯೆನ್ನಿ. ಹಾಳೂರಿಗೆ ಜೀವಂತಿಕೆ ತುಂಬುವ ಈ ಸಾಹಸದ ಹಿಂದೆ, 'ನಮ್ಮೂರಿನಲ್ಲಿ ಬಹುಶಃ ನಾನು ಇನ್ನೆಂದೂ ಜೀವಂತ ಮಕ್ಕಳನ್ನು ನೋಡುವುದೇ ಇಲ್ಲವೇನೋ' ಎನ್ನುವ ನಿಟ್ಟುಸಿರ ನಿಡುಸುಯ್ಯುವಿಕೆಯೂ ಕಿವಿಗೆ ಅಪ್ಪಳಿಸುತ್ತದೆ. ಅದೇ ಊರಿನಲ್ಲಿ ಹುಟ್ಟಿ ಬೆಳೆದ ಅಯಾನೊಗೆ ತನ್ನೂರು ತಲುಪಿರುವ ಸ್ಥಿತಿಯನ್ನು ಒಪ್ಪಿಕೊಳ್ಳಲು ಆಗದ ಅಸಹಾಯಕತೆಯ ಪ್ರತಿಧ್ವನಿಯಂತೆ ಅವರ ನಿಟ್ಟುಸಿರು ಭಾಸವಾಗುತ್ತೆ.

'ನನ್ನ ಊರು ಮೊದಲು ಹೀಗಿರಲಿಲ್ಲ. ಆಸ್ಪತ್ರೆ, ಜೂಜುಕಟ್ಟೆ, ಹೋಟೆಲ್‌ಗಳೆಲ್ಲವೂ ಇದ್ದವು.



